ಮೂಲ ದಾವಾ ನಂಃ 85/2020

ಪಿ ಡಬ್ಲುಃ 02

ಸಾಕ್ಷಿಯನ್ನು ದಿನಾಂಕಃ **28-03-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಜಿ.ಜಿ.ಬಿ. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಕುರಿತು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿರುತ್ತದೆ.

**ಪಾಟೀ ಸವಾಲುಃ ಶ್ರೀ ಜಿ.ವಿ.ಬಿ. ವಕೀಲರಿಂದಃ**

ನಮ್ಮ ಮನೆ ಹೊಸಾಕುಳಿ ಗ್ರಾಮದ ಗುಡ್ಡೆಬಾಳದಲ್ಲಿದೆ. ದಾವಾ ಸ್ಥಳವು ಸಾಲಕೋಡ ಗ್ರಾಮದಲ್ಲಿದೆ. ನಮ್ಮ ಮನೆಯಿಂದ ದಾವಾ ಸ್ಥಳವು ಅಂದಾಜು 5 ಫರ್ಲಾಂಗ ದೂರದಲ್ಲಿದೆ. ದಾವಾ ಸ್ಥಳವು ಖುಷ್ಕಿ ಜಾಗವಾಗಿದ್ದು ಅದು ಮಾಲ್ಕಿ ಸ್ಥಳವಾಗಿರುತ್ತದೆ.

ದಾವಾ ಸ್ಥಳದ ಪಶ್ಚಿಮ ದಿಕ್ಕಿಗೆ 295 ಬೆಟ್ಟ 1 ಸುಬ್ರಾಯ ಹೆಗಡೆಯವರ ಜಾಗವಿರುತ್ತದೆ ಹಾಗೂ ಅದರ ತಗ್ಗಿನಲ್ಲಿ ಕೃಷ್ಣಕೇರಿ ಶಾಲೆ ಬರುತ್ತದೆ. ಸದ್ರಿ ಜಾಗವು 1 ನೇ ವಾದಿಯ ಮಾಲ್ಕಿ ಜಾಗವಾಗಿದ್ದು, ನಾನು ಆ ಜಾಗದ ದಾಖಲೆಗಳನ್ನು ಪರಿಶೀಲಿಸಿ ನೋಡಿದ್ದೇನೆ. ಶಾಲೆಗೆ 5 ಗುಂಟೆ ಜಾಗ ಬೇಕಾದಾಗ ನಾವು 1 ನೇ ವಾದಿಯನ್ನು ಕೇಳಿದ್ದೆವು. ಆಗ ಸದ್ರಿ ಸ್ಥಳದ ದಾಖಲೆಗಳನ್ನು ನಾನು ಪರಿಶೀಲಿಸಿ ನೋಡಿದ್ದೇವೆ. 295 ಬೆಟ್ಟ 1 ರ 5 ಗುಂಟೆ ಜಾಗವನ್ನು 1 ನೇ ವಾದಿಯು ಶಾಲೆಯ ಕಟ್ಟಡವನ್ನು ನಿರ್ಮಿಸುವುದಕ್ಕಾಗಿ ಅಂದಾಜು 50 ವರ್ಷಗಳ ಹಿಂದೆಯೇ ಕೊಟ್ಟಿದ್ದಾರೆ. ದಾವಾ ಸ್ಥಳದ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಬೇರೆ ಜಾಗಗಳಿದ್ದು ಅವುಗಳ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ.

ದಾವಾ ಸ್ಥಳದ 100 ಫೂಟ್ ಅಂತರದಲ್ಲಿ ನನ್ನ ಮಾಲ್ಕಿ ಜಾಗವಾದ ಸ.ನಂಃ 346 ರ ಸ್ಥಳ ಬರುತ್ತದೆ, ಹಾಗೂ ಸದ್ರಿ ಸ್ಥಳವು ಭಾಗಾಯತಕ್ಕೆ ಬಿಟ್ಟಂತಹ ಹಾಡಿ ಸ್ಥಳವಾಗಿರುತ್ತದೆ. ಸದ್ರಿ ಸರ್ವೆ ನಂಬರಿನ ಕಂದಾಯ ದಾಖಲೆಗಳಲ್ಲಿ ನನ್ನ ಹೆಸರು ಇರುತ್ತದೆ. ಸದ್ರಿ ಜಾಗದ ಕಬ್ಜಾ ನಮ್ಮ ತಾಬಾದಲ್ಲಿರುತ್ತದೆ.

ದಾವಾ ಸ್ಥಳದಲ್ಲಿ ಗೇರು ಹಾಗೂ ಇನ್ನಿತರ ಹಣ್ಣು ಹಂಪಲುಗಳನ್ನು ಬೆಳೆಯುತ್ತಾರೆ. ಸದ್ರಿ ದಾವಾ ಸ್ಥಳದಲ್ಲಿ ಕೊಳವೆ ಬಾವಿ ಹಾಗೂ ಬಾವಿ ಇರುವುದಿಲ್ಲ. ದಾವಾ ಸ್ಥಳಕ್ಕೆ ಹೋಗುವಂತ ಅವಶ್ಯಕತೆ ನನಗಿರುವುದಿಲ್ಲ. ದಾವಾ ಸ್ಥಳದ ತಗ್ಗಿನಲ್ಲಿ ಕೃಷ್ಣಕೇರಿ ಶಾಲೆಯಿದ್ದು ಅದರ ತಗ್ಗಿನಲ್ಲಿ ಟಾರ್ ರಸ್ತೆ ಬರುತ್ತಿದ್ದು, ಸದ್ರಿ ರಸ್ತೆಯು ಕವಲಕ್ಕಿಯಿಂದ ಗುಡ್ಡೆಬಾಳ ಭಾಸ್ಕೇರಿ ಕಡೆಗೆ ಬಂದು ರಾಷ್ಟ್ರೀಯ ಹೆದ್ದಾರಿಯನ್ನು ಕೂಡುತ್ತದೆ.

ಈ ಹಿಂದೆ ನಾನು ನ್ಯಾಯಾಲಯದ ಮುಂದೆ ತಡೆಯಾಜ್ಞೆಯ ಅರ್ಜಿಯ ಕುರಿತಾಗಿ ಒಂದು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೆನು ಎಂದರೆ ಸರಿ. ದಿನಾಂಕಃ 16.03.2022 ರಂದು ಸಲ್ಲಿಸಿರುವ ನನ್ನ ಆ ಪ್ರಮಾಣ ಪತ್ರದಲ್ಲಿ ದಾವಾ ಸ್ಥಳದ ಲಗ್ತವಾಗಿ ನನ್ನ ಜಾಗ ಬರುತ್ತದೆ ಎಂಬುದನ್ನು ನಮೂದಿಸಿಲ್ಲ ಎಂದರೆ ಸರಿ. ದಾವಾ ಸ್ಥಳದ ಹತ್ತಿರ ನನ್ನ ಜಾಗ ಇಲ್ಲದೇ

ಇದ್ದರೂ ಸಹ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಸ್ಥಳದ ಹತ್ತಿರ 100 ಫೂಟ್ ಅಂತರದಲ್ಲಿ ನನ್ನ ಜಾಗ ಇರುವುದಾಗಿ ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಯಾವುದೇ ಕಾಲಕ್ಕೂ ದಾವಾ ಸ್ಥಳವನ್ನು ಕಬ್ಜಾ ವೈವಾಟಿ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

C / c . ಪ್ರಧಾನ ಪ್ರ ದ ನ್ಯಾದಂ ,ಹೊನ್ನಾವರ.